**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 677/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಖಲೀಂ ಉಲ್ಲಾ ಖಾನ್** | ಪ್ರಾಸಾಃ 5 |
| ತಂದೆಯ/ಗಂಡನ ಹೆಸರು | | ರೆಹಮತ್ ಉಲ್ಲಾ ಖಾನ್ | ಚಾಸಾಃ 8 |
| ವಯಸ್ಸು | | 51 ವರ್ಷ | |
| ಕೆಲಸ | | ಟೀ ಅಂಗಡಿ ವ್ಯಾಪಾರ | ಸಾ ಪ್ರ ಬೋ |
| ವಾಸ | | ದೊಡ್ಡಕವಲಂದೆ ಗ್ರಾಮ | ದಿಃ 25/07/2023 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿ ನನ್ನ ಮಗ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿಯು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಸೀಮೆಎಣ್ಣೆಯನ್ನು ಶೇಖರಿಸಿ ಇಟ್ಟಿರಲಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಬ್ಬಿಣದ ಬಕೇಟ್, 5 ಲೀಟರ್ ಅಳತೆ ಮಾಪನ ,4 ಬಾಟಲ್ ಗಳು, ಪ್ಲಾಸ್ಟಿಕ್ ಕ್ಯಾನ್ ಗಳು ಮತ್ತು ಲಾಳಿಕೆಯನ್ನು ನೋಡಿ ಗುರುತಿಸಿಲ್ಲ.
(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ನನ್ನ ಮಗ ಹಳ್ಳಿಗಳಲ್ಲಿನ ಕಾರ್ಡುದಾರರಿಂದ ಸೀಮೆಎಣ್ಣೆಯನ್ನು ಲೀಟರ್ ಗೆ 38/- ರೂಗಳಂತೆ ಅಕ್ರಮವಾಗಿ ಖರೀದಿಸಿ ನಮ್ಮ ಹೊಟೇಲ್ ಗೆ ಹೋಗುವ ಲಾರಿ ಡ್ರೈವರ್ ಗಳಿಗೆ 40/- ರೂ ನಂತೆ ಕಾಳಸಂತೆಯಲ್ಲಿ ಸೀಮೆಎಣ್ಣೆ ಮಾರಾಟ ಮಾಡಲು ನಮ್ಮ ಆರ್.ಕೆ. ಹೊಟೇಲ್ ಗೆ ಹೊಂದಿಕೊಂಡಂತೆ ಇರುವ ಮಳಿಗೆಯಲ್ಲಿ 6 ಪ್ಲಾಸ್ಟಿಕ್ ಕ್ಯಾನ್ ಗಳಲ್ಲಿ 210 ಲೀಟರ್ ಸೀಮೆಎಣ್ಣೆಯನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದ ಎಂದರೆ ಸರಿಯಲ್ಲ. ದಿನಾಂಕ 10.11.2013 ರಂದು ಆಹಾರ ಇಲಾಖೆಯವರು ಮತ್ತು ಕವಲಂದೆ ಪೊಲೀಸ್ ರವರು ದಾಳಿ ಮಾಡಿ ಸದರಿ ಸೀಮೆಎಣ್ಣೆ ಕ್ಯಾನ್ ಗಳನ್ನು, ಕಬ್ಬಿಣದ ಬಕೇಟ್, 5 ಲೀಟರ್ ನ ಒಂದು ಅಳತೆ ಮಾಪನ ಮತ್ತು ಒಂದು ಕಬ್ಬಿಣದ ಆಲಿಕೆಯನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮಗನಾಗಿರುವುದರಿಂದ ಈ ಮೇಲಿನ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿತರಿಗೆ

ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ದಿನಾಂಕ 22.11.2013 ರಂದು ಈಗ ನನಗೆ ಓದಿ ಹೇಳಿದಂತೆ "ಬೇಗನೆ ಹಣ ಮಾಡಿ -------- ನನ್ನ ಹೇಳಿಕೆ ನೀಡಿರುತ್ತೇನೆ" ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**